ಓ.ಎಸ್.ನಂ.214/2015
ಡಿ.ಡಬ್ಲ್ಯು-3

**ಸಾಕ್ಷಿಯನ್ನು ದಿಃ 16.12.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿ ವಾದಿ ಪರ ಶ್ರೀ. ಎ ಆರ್ ಆರ್ ವಕೀಲರಿಂದ.**

ಸಾಕ್ಷಿ ಇಂದು ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

ಪಾಟೀಸವಾಲುಃ ವಾದಿ ಪರ ಶ್ರೀ ಎಲ್ ವಿ ವಿ ವಕಿಲರಿಂದ

ಪ್ರತಿವಾದಿಗಳು ನಮ್ಮ ಊರಿನವರು. ನಾನು ಎಸ್ ಎಸ್ ಎಲ್ ಸಿ ಯವರಿಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಯು 40x45 ಅಡಿ ವಿಸ್ತೀರ್ಣದಲ್ಲಿ ಇರುವ ಮನೆಗೆ ಸಂಬಂಧಿಸಿದಂತೆ ಈ ದಾವೆಯನ್ನು ಹಾಕಿರುತ್ತಾರೆ. ಸದರಿ ಮನೆಯು ಕೆಂಚನಾಹಳ್ಳಿ ಗ್ರಾಮಕ್ಕೆ ಸೇರಿರುತ್ತದೆ. ಕೆಂಚನಹಳ್ಳಿ ಮತ್ತು ಬಂಧಿಗೌಡನಪಾಳ್ಯಕ್ಕೆ ಅರ್ದ ಕಿ.ಮೀ ದೂರು ಇದೆ. ಕೆಂಚನಹಳ್ಳಿ ಮತ್ತು ಬಂಡಿಗೌಡನಪಾಳ್ಯ ಹಳ್ಳಿಗಳಿಗೆ ಸಂಬಂಧಿಸಿದ ಅಸ್ತಿಗಳಲ್ಲಿ ಪ್ರತ್ಯೇಕವಾಗಿ ಕೆಂಚನಹಳ್ಳಿ ಮತ್ತು ಬಂಡಿಗೌಡನಪಾಳ್ಯ ಎಂದು ಬರುತ್ತದೆ ಎಂದರೆ ಸಾಕ್ಷಿಯು ಕೆಂಚನಹಳ್ಳಿ ಗ್ರಾಮದ ಹೆಸರು ಮಾತ್ರ ಬರುತ್ತದೆ, ಬಂಡೀಗೌಡನಪಾಳ್ಯದ ಹೆಸರು ಬರುವುದಿಲ್ಲ ಎಂದು ನುಡಿಯುತ್ತಾರೆ. ಬಂಡೀಗೌಡನಪಾಳ್ಯದಲ್ಲಿ ಇರುವ ಅಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಪಂಚಾಯಿತಿ ಮತ್ತು ತಾಲ್ಲೂಕು ಕಛೇರಿ ದಾಖಲೆಗಳಲ್ಲಿ ಸದರಿ ಗ್ರಾಮದ ಹೆಸರು ಬರುವುದಿಲ್ಲ. ಬಂಡೀಗೌಡನಪಾಳ್ಯದಲ್ಲಿ ಇರುವ ನನ್ನ ಮನೆಗೆ ಸಂಬಂಧಿಸಿದ ಪಂಚಾಯ್ತಿ ದಾಖಲೆಗಳಲ್ಲಿ ಕೆಂಚನಹಳ್ಳಿ ಗ್ರಾಮ ಎಂದು ಬರುತ್ತಿದೆ.

ದಾವಾ ಆಸ್ತಿಯು ಮೂಲದಲ್ಲಿ ಚಿಕ್ಕಹುಡುಗಯ್ಯ ನವರಿಗೆ ಸೇರಿತ್ತು. ದಾವಾ ಆಸ್ತಿಯನ್ನು ವಾದಿಯ ಗಂಡ ರಾಮಚಂದ್ರಯ್ಯನವರಿಂದ 1 ನೇ ವಾದಿಯ ಗಂಡ ಶಿವರಾಮಯ್ಯ ಖರೀದಿ ಮಾಡಿರುತ್ತಾರೆ. ಸದರಿ ಅಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ವಾದಿಯು ಸರ್ವೆ ನಂಬರ್ 10/6 , 5 ಗುಂಟೆ ವಿಸ್ತೀರ್ಣದ ಅಸ್ತಿಗೆ ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೆಂಚನಹಳ್ಳಿ ಗ್ರಾಮದ ಸ.ನಂ. 10/6 ರ ಅಸ್ತಿಯನ್ನು ನಾನು ನೋಡಿಲ್ಲ. ವಾದಿಯು ಸಲ್ಲಿಸಿದ ದಾವಾ ಆಸ್ತಿಯಲ್ಲಿ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ರಾಮಚಂದ್ರಯ್ಯನವರಿಂದ ಶಿವರಾಮಯ್ಯನವರು ಅಸ್ತಿ ಖರೀದಿ ಮಾಡಿದ ಕ್ರಯ ಪತ್ರವನ್ನು ನೊಡಿ , ಓದಿ ತಿಳಿದು ಕೊಂಡಿರುತ್ತೇನೆ. ಅದು ನಿಡಿ-3 ದಾಖಲೆಯಾಗಿರುತ್ತದೆ. ನಿಡಿ-3 ರ ಅಡಿಯಲ್ಲಿ ಖಾನೇಶುಮಾರಿ 86 ರ ಅಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಿಡಿ-9

ಮತ್ತು ನಿಡಿ10 ದಾಖಲೆಗಳಲ್ಲಿ ಬಂಡೀಗೌಡನಪಾಳ್ಯ ಎಂದು ನಮೂದು ಇದೆ ಎಂದರೆ ಸರಿ. ನಿಡಿ-9 ಮತ್ತು 10 ರಲ್ಲಿ ಇರುವ ಆಸ್ತಿಯು ಬಂಡೀಗೌಡನಪಾಳ್ಯಕ್ಕೆ ಸೇರಿದ ಅಸ್ತಿ ಎಂದರೆ ಸರಿ. ದಾವಾ ಆಸ್ತಿಯು ಮೂಲದಲ್ಲಿ ವಾದಿಯ ಗಂಡ ರಾಮಚಂದ್ರಯ್ಯನವರಿಗೆ ಬಾಗಾಂಶದ ಮೂಲಕ ಬಂದಿತ್ತು ಎಂದರೆ ಸರಿ. ವಾದಿಯ ತಂದೆ ದಾಸೇಗೌಡ ರವರನ್ನು ನಾನು ನೋಡಿಲ್ಲ. ಸದರಿ ದಾಸೇಗೌಡರವರಿಗೆ ವಾದಿಯ ಗಂಡ ರಾಮಚಂದರಯ್ಯ ನವರು ದಾವಾ ಆಸ್ತಿಯನ್ನು ನಿಪಿ-1 ರ ಅಡಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯು ವಾದಿಗೆ ಕೋರ್ಟನಲ್ಲಿ ಸಲ್ಲಿಸಿದ ಭಾಗಾಂಶದ ದಾವೆಯ ಮೂಲಕ ಬರುತ್ತದೆ ಎಂದರೆ ಗೊತ್ತಿಲ್ಲ. ನಿಪಿ-4 ರ ಪ್ರಕಾರ ದಾವಾ ಆಸ್ತಿಯಲ್ಲಿ ವಾದಿಯ ಹೆಸರು ನಮೂದು ಆಗಿದೆ ಎಂದರೆ ಸರಿ. ಸ.ನಂ. 10/6 ರ ಅಸ್ತಿಯಲ್ಲಿ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ " ಆಕೆ ಹೇಳುವಂತೆ ಆಕೆಯ ಗಂಡನಿಗೆ ಜೀವನಾಂಶಕ್ಕಾಗಿ ಅಸ್ತಿ ಬರೆದು ಕೊಡುವ ಹಕ್ಕು ಇರಲಿಲ್ಲ ಆದಾಗ್ಯೂ ಸುಳ್ಳು ರಾಜಿ ಪತ್ರ ಬರೆದು ಕೊಟ್ಟಿರುತ್ತಾನೆ " ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ಅದು ಸುಳ್ಳು. ಸ.ನಂ. 10/6 ರ ಅಸ್ತಿಯಲ್ಲಿ ವಾದಿಯೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಅಸ್ತಿಯಲ್ಲಿ ವಾದಿಗೆ ಸಂಬಂಧಿಸಿದ ಒಂದು ಹೆಂಚಿನ ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಸಂಬಂಧಿಸಿದ ಅಸ್ತಿಯನ್ನು ಕಬಳಿಸುವ ಉದ್ದೇಶದಿಂದ ಬಂಧೀಗೌಡನಪಾಳ್ಯದ ದಾಖಲಾತಿಗಳನ್ನು ಸಲ್ಲಿಸಿ ನನ್ನ ಕಡೆಯಿಂದ ಸುಳ್ಳು ಸಾಕ್ಷಿ ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಖಾನೇಷು ಮಾರಿ ನಂ. 86 ಎಂಬ ಅಸ್ತಿಯು ರಾಮಚಂದ್ರಯ್ಯನವರಿಗೆ ಇರಲೇ ಇಲ್ಲ ಎಂದರೆ ಸರಿಯಲ್ಲ. ಖಾನೇಷುಮಾರಿ 86 ಕ್ಕೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ಹೊರತುಪಡಿಸಿ ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ. ವಾದಿಯು ಸಲ್ಲಿಸಿದ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಮಲ್ಲೇಶ್ ರವರ ಮಾತನ್ನು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷವನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.